**ದಿಃ 29.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಃ ಸ ಸ ಅ ರವರಿಂದ**

ದಿಃ 26.08.2021 ರಂದು 1 ನೇ ಆರೋಪಿಯ ಮನೆಗೆ ಹೋಗಿ ಪಂಚರಾದ ಚಾಸಾ-6 ಮತ್ತು 7 ರವರ ಸಮಕ್ಷಮ ಸ್ಥಳದ ಪಂಚನಾಮೆಯನ್ನು ಮಧ್ಯಾಹ್ನ 3-00 ರಿಂದ 4-30 ಗಂಟೆ ಸಮಯದವರೆಗೆ ಮಾಡಿ ಅದೇ ಸಮಯದಲ್ಲಿ 3 ಗ್ರಾಮ್ ಕೆಂಪು ಮತ್ತು ಬಿಳಿ ಹರಳು ಇರುವ ಚಿನ್ನದಂತೆ ಇರುವ ಉಂಗುರವನ್ನು ಮತ್ತು 1 ನೇ ಆರೋಪಿ ಹಾಗೂ ಆತ ಮಾಡಿಕೊಂಡಿದ್ದ ಮೊದಲನೇ ಮದುವೆಯ ವಿಚ್ಛೇದನ ಪಡೆದುಕೊಂಡಿರುವ ಮಾನ್ಯ ನ್ಯಾಯಾಲಯದ ಆದೇಶದ ಪ್ರತಿಗಳನ್ನು ಹಾಗೂ 1 ನೇ ಆರೋಪಿಯ ಆಧಾರ್ ಕಾರ್ಡ್ ಅನ್ನು ಅಮಾನತ್ತು ಪಡಿಸಿಕೊಂಡು ಮಾಲು ಪಟ್ಟಿ ಸಂಖ್ಯೆ 49/2021 ರಲ್ಲಿ ಭರಾಯಿಸಿಕೊಂಡೆನು. ಸಾಕ್ಷಿಯು ನಿಪಿ-9 ಪಂಚನಾಮೆಯಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಉಂಗುರದ ಫೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-16 ಎಂದು ಗುರುತಿಸಲಾಯಿತು. ನಂತರ ಅದೇ ದಿನ 1 ಮತ್ತು 2 ನೇ ಆರೋಪಿತರನ್ನು ದಸ್ತಗಿರಿ ನಿಯಮ ಜರುಗಿಸಿ ಠಾಣಾ ದಾಖಲಾತಿಯಲ್ಲಿ ನಮೂದು ಮಾಡಿ ಸೂಕ್ತ ಕ್ರಮ ಜರುಗಿಸಿ ಮಾನ್ಯ ನ್ಯಾಯಾಲಯದ ಮುಂದೆ ಆರೋಪಿತರನ್ನು ಹಾಜರುಪಡಿಸಿರುತ್ತೇನೆ. ನಂತರ ಅದೇ ದಿನ ಚಾಸಾ-1 ರಿಂದ 3, 6 ಮತ್ತು 7 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಆರೋಪಿತರು ನ್ಯಾಯಾಲಯದಿಂದ ಜಾಮೀನನ್ನು ಪಡೆದು ಹಾಜರುಪಡಿಸಿದ್ದು, ಮಾನ್ಯ ನ್ಯಾಯಾಲಯದ ಆದೇಶದ ಪ್ರತಿಯನ್ನು ಪಡೆದುಕೊಂಡಿರುತ್ತೇನೆ. ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-17 ರವರಿಗೆ ವಹಿಸಿಕೊಟ್ಟೆನು.

**ಪಾಟೀ ಸವಾಲುಃ ಃ ಶ್ರೀ ಜಿ.ಜಿ. ಆರೋಪಿತರ ಪರ ವಕೀಲರಿಂದ**

ನಿಪಿ-1 ದೂರನ್ನು ಟೈಪ್ ಮಾಡಿ ಕೊಡಲಾಗಿತ್ತು. ನಿಪಿ-1 ದೂರನ್ನು ಠಾಣೆಯಲ್ಲಿ ಟೈಪ್ ಮಾಡಿಸಿ ಚಾಸಾ-1 ರವರ ಸಹಿ ಪಡೆಯಲಾಗಿದೆ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳದ ಫೋಟೋವನ್ನು ತೆಗೆಯಲಾಗಿದೆ. ಸದರಿ ಫೋಟೋವನ್ನು ಹಾಜರುಪಡಿಸಿಲ್ಲ. ಕೃತ್ಯ ನಡೆದ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿಲ್ಲ ಹಾಗೂ ಸಾಕ್ಷಿದಾರರ ಸಹಿಯನ್ನು ಪಡೆದಿಲ್ಲ ನಾನು ಸುಳ್ಳು ನುಡಿದಿದ್ದೇನೆ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳದ ನೆರೆಹೊರೆಯವರನ್ನು ಸಾಕ್ಷಿದಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿಯು ಆ ಸಮಯದಲ್ಲಿ ಅಲ್ಲಿ ಯಾರೂ ಇರಲಿಲ್ಲ

ಎಂದು ನುಡಿಯುತ್ತಾರೆ. ಪಿರ್ಯಾದಿಗೆ ಅನುಕೂಲವಾಗುವಂತೆ ಸಾಕ್ಷಿದಾರರನ್ನು ತೆಗೆದುಕೊಂಡು ನಿಪಿ-2 ಪಂಚನಾಮೆಯನ್ನು ಮಾಡಲಾಗಿದ್ದು, ಕೃತ್ಯ ನಡೆದ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-9 ಪಂಚನಾಮೆಯ ಸಮಯದಲ್ಲಿ ಉಂಗುರಕ್ಕೆ ಸಂಬಂಧಿಸಿದ ರಶೀದಿಯನ್ನು ಕೊಟ್ಟಿರಲಿಲ್ಲ. ನಿಪಿ-9 ರಲ್ಲಿ ಅಮಾನತ್ತು ಪಡಿಸಿಕೊಂಡ ಉಂಗುರ ಮಹಿಳೆ ಹಾಗೂ ಪುರುಷ ಇಬ್ಬರೂ ಧರಿಸುವಂತೆ ಇತ್ತು. ನಿಪಿ-9 ರಲ್ಲಿ ಅಮಾನತ್ತು ಪಡಿಸಿಕೊಂಡ ಉಂಗುರ ಹುಡುಗನ ಕಡೆಯಿಂದ ಹುಡುಗಿಗೆ ಕೊಟ್ಟಂತಹ ಉಂಗುರವಾಗಿತ್ತು ಎಂದರೆ ಸರಿಯಲ್ಲ. ಸದರಿ ಉಂಗುರ ವರದಕ್ಷಿಣೆಗಾಗಿ ಕೊಟ್ಟಂತಹ ಉಂಗುರ ಆಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ವಸ್ತುಗಳನ್ನು ಸ್ಥಳದಲ್ಲಿ ಅಮಾನತ್ತುಪಡಿಸಿಕೊಂಡಿಲ್ಲ ಸುಳ್ಳು ನುಡಿದಿದ್ದೇನೆ ಎಂದರೆ ಸರಿಯಲ್ಲ. ಮಾಲು ಅಮಾನತ್ತು ಪಂಚನಾಮೆಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಸದರಿ ಪ್ರಕರಣಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸುಳ್ಳು ನುಡಿದಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಯನ್ನು ದಾಖಲಿಸಿಕೊಂಡಿಲ್ಲ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯ ಮಾಡಲು ನಾನು ಆರೋಪಿತರ ವಿರುದ್ಧ ಸುಳ್ಳು ದೂರನ್ನು ಸ್ವೀಕರಿಸಿ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನ ರೀತ್ಯಾ ಬೆರಳಚ್ಚುಗಾರರಿಂದ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಅದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**